## ರೈಟ್ ರೈಟ್... ವಿದೇಶಿ ಪ್ರವಾಸ

ಡಿ.ಜಿ. ಮಲ್ಲಿಕಾರ್ಜುನ ಅವರ ಬರಹ, ವಿದೇಶ ಪ್ರವಾಸ ಮಾಡುವವರಿಗೆ ಕೈಪಿಡಿ ಇದ್ದ ಹಾಗೆ ಇದೆ. ಸಿರಿವಂತರಿಗೆ ಮಾತ್ರ ವಿದೇಶ ಪ್ರವಾಸ; ಬಡವರಿಗೆಲ್ಲ ಬರಿ ಕನಸು ಅನ್ನುವ ಭಾವವನ್ನು ದೂರ ಮಾಡುವ ಹಾಗೆ ಇದೆ. ನಾನು 20 ದೇಶ ಸುತ್ತಿ ಬಂದವನಾದ್ದರಿಂದ, ಅವರ ವಿವರಣೆ, ಸಲಹೆಗಳ ಮಹತ್ವ ನನಗೆ ಗೊತ್ತಿದೆ. ಇದು ಎಲ್ಲರೂ ಓದಿ ತಿಳಿದುಕೊಳ್ಳಬೇಕಾದ ಪ್ರವಾಸಿ ಬರಹ.

—ಟಿ.ಎಂ. ಮಾನಪ್ಪ, ಗೋಪಾಳ, ಶಿವಮೊಗ್ಗ




ಸುಲಭ ಹಾಗೂ ಕಡಿಮೆ ಖರ್ಚಿನಲ್ಲಿ ಸಾಮಾನ್ಯರೂ ಕೂಡ ವಿದೇಶ ಪ್ರವಾಸ ಮಾಡಬಹುದಾದ ಕುರಿತು ಈ ಲೇಖನದಲ್ಲಿ ವಿವರವಾದ ಮಾಹಿತಿ ಇದೆ. ಸೂಕ್ತವಾದ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಂಡರೆ ವಿದೇಶ ಪ್ರವಾಸ ಸುಲಭವೆಂದು ತಿಳಿಸುವ ಮೂಲಕ ಸಾಮಾನ್ಯರು ತಮ್ಮ ಕನಸನ್ನು ನನಸಾಗಿಸಿಕೊಳ್ಳಲು ಲೇಖಕರು ಇಂಬು ನೀಡಿದ್ದಾರೆ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ನನ್ನ ಅನುಭವವೂ ಹೌದು

'ಜೀವನ ಜೋಕಾಲಿ' ಓದಿದೆ. ನನಗೂ ಈ ರೀತಿಯ ಹಲವು ಅನುಭವಗಳು ಆಗಿವೆ. ವಿವಾಹಪೂರ್ವದಲ್ಲಿ ಒಮ್ಮೆ ನಾನು ವಿವಾಹ ಆಗಲಿರುವ ಹುಡುಗಿಯ ಹತ್ತಿರ ಮಾತನಾಡಲು ಬಹಳ ಆಸೆಯಿಂದ ಬಸ್ ನಿಲ್ದಾಣಕ್ಕೆ ಹೋಗಿದ್ದೆ. ಆದರೆ ಬಸ್ ಬಂದ ತಕ್ಷಣ ಭಿಕ್ಷುಕಿಯೋರ್ವಳು ನಮ್ಮ ನಡುವೆ ತುಂಬಾ ಹೊತ್ತು ಬೇಡುತ್ತ ನಿಂತುಬಿಟ್ಟಳು. ಬಸ್ ಸಹ ಜಾಸ್ತಿ ಹೊತ್ತು ನಿಲ್ಲಲಿಲ್ಲ. ಇದರಿಂದ ನನಗೆ ಮಡದಿಯಾಗಲಿರುವವಳ ಹತ್ತಿರ ಮಾತಾಡುವುದಿರಲಿ, ಅವಳ ಮೋರೆ ನೋಡಲೂ ಆಗದೇ ಹೋಯ್ತು!

—ನಾರಾಯಣ ಯಾಜಿ. ಶಿರಾಲಿ

## 'ಹಳ್ಳಿಯ ಚಿತ್ರಗಳ ಸಂಕ್ರಾಂತಿ ಸಂಪುಟ'

ಡಿ.ಎಂ. ಘನಶ್ಯಾಮ ಅವರ ಲೇಖನ ಸಕಾಲಿಕವಾಗಿದ್ದು. ಆದರೆ ಇಡೀ ಲೇಖನದಲ್ಲಿ ವ್ಯಕ್ತವಾಗಿರುವ ಹಳಹಳಿಕೆ ಇಷ್ಟವಾಗಲಿಲ್ಲ. ಬೆಂಗಳೂರಿನಂಥ ಮಹಾನಗರದ ಸಕಲ ಸೌಲಭ್ಯಗಳೂ, ಐಷಾರಾಮಗಳೂ ಬೇಕು ಎಂದು



ಬಯಸುವ ನಾವು, ನಮ್ಮ ಹಳ್ಳಿಗಳು ಮಾತ್ರ ದಶಕಗಳ ಹಿಂದೆ ಹೇಗಿತ್ತೋ ಹಾಗೆಯೇ ಇರಬೇಕು ಎಂದು ಬಯಸುವುದು ಎಷ್ಟು ಸರಿ? 'ಸಂಕ್ರಾಂತಿ' ಎಂದರೇ ಬದಲಾವಣೆಯ ಪರ್ವಕಾಲ ಎಂಬ ಅರ್ಥವಿದೆ. ಹೀಗೆ ಚಲನಶೀಲತೆಯ ಧ್ವನಿಯನ್ನು ತನ್ನೊಳಗೆ ಇರಿಸಿಕೊಂಡಿರುವ ಈ ಹಬ್ಬದ ರೀತಿನೀತಿ ಮಾತ್ರ ಬದಲಾಗಬಾರದು ಎಂದರೆ ಹೇಗೆ? ಅಪರೇರಲ್ ಪಾರ್ಕ್, ಬಂತು, ಇಂಡಸ್ಟ್ರಿಯಲ್ ಏರಿಯಾ ಆಯ್ತು, ಕ್ರಿಕೆಟ್ ಆಡುತ್ತಿದ್ದ ಜಾಗದಲ್ಲಿ ಬಿಲ್ಡಿಂಗುಗಳು ಬಂದವು ಎನ್ನುವುದನ್ನೆಲ್ಲ ಕಳೆದುಕೊಂಡಿದ್ದರ ಸಂಕೇತವಾಗಿಯಷ್ಟೇ ನೋಡುವ ಲೇಖಕರು, ಅವುಗಳಿಂದ ಆ ಹಳ್ಳಿ ಪಡೆದುಕೊಂಡಿರುವುದರ ಬಗ್ಗೆಯೂ ಕೊಂಚ ಗಮನ ಹರಿಸಬೇಕಾಗಿತ್ತು ಎನ್ನುವುದು ನನ್ನ ಅಭಿಪ್ರಾಯ.

—ರಾಜಶೇಖರ, ದೊಡ್ಡಬಳ್ಳಾಪುರ

ಈ ಲೇಖನದಲ್ಲಿ ಬೆಂಗಳೂರಿನ ಬಗ್ಗೆ ಗೌರಿ ಅಂದುಕೊಳ್ಳುವ ಮಾತು ನಮ್ಮದೂ ಹೌದು. ಬೆಂಗಳೂರು ಎಂದರೆ ಬೆರಗಿನಿಂದ ನೋಡುತ್ತಿದ್ದವರೇ 'ಇದೆಂಥ ಬೆಂಗಳೂರು' ಎಂದು ಅಸಹನೆಯಿಂದ ಹೇಳಬೇಕಾಗಿರುವುದು ನಿಜಕ್ಕೂ ದುರದೃಷ್ಟಕರವೇ ಸರಿ.

—ಎನ್.ಜಿ. ವೇಣುಗೋಪಾಲ್, ಬೆಂಗಳೂರು

## ಲೋಕನಾಥ್ ನೆನಪುಗಳು



ಲೋಕನಾಥ್ ಬಗೆಗಿನ ಲೇಖನ ಚೆನ್ನಾಗಿತ್ತು. 650 ಚಿತ್ರಗಳ ಮೂಲಕ ಕನ್ನಡ ಚಿತ್ರರಸಿಕರ ಮನಗೆದ್ದ ಹಿರಿಯ ನಟ ಅಂಕಲ್ ಲೋಕನಾಥ್ ಇವರ ವಿದಾಯದಿಂದ ಕನ್ನಡ ಚಿತ್ರರಂಗವು ಅಪರೂಪದ ವ್ಯಕ್ತಿಯನ್ನು ಕಳೆದುಕೊಂಡಂತಾಗಿದೆ.

—ಕೆ.ಎಸ್. ವಿಠ್ಠಲ್ ರಾವ್, ಬೆಂಗಳೂರು.

ಲೋಕನಾಥರ ಸಿನಿಮಾ ರಂಗದ ಹಲವು ನೆನಪುಗಳನ್ನು, ಸಾಧನೆಗಳನ್ನು ಚಿತ್ರಿಸಿದ ಸುಂದರ ನುಡಿನಮನ. ಸುಮಾರು ಸಾವಿರ ನಾಟಕಗಳಲ್ಲಿ ಅಭಿನಯಿಸಿದ ತಮ್ಮ ರಂಗಭೂಮಿ (ನಟನೆಯ) ಅನುಭವದಲ್ಲಿ ಚಿತ್ರರಂಗದಲ್ಲಿ ಪ್ರವೇಶಿಸಿ ತಮ್ಮದೇ ಆದ ಛಾಪು ಮೂಡಿಸಿದ ನಟನ ಸಮಗ್ರ ಮಾಹಿತಿ ಒದಗಿಸಿದ ಲೇಖನ. ಸಿನಿಮಾ ನಟರಂತೆ ಜಡವಾಗಿ ಉಳಿಯದೆ ಎಲ್ಲರೊಡನೆ ಪ್ರೀತಿಯಿಂದ ನಡೆದು, ಕಿರಿಯರ ಬಗ್ಗೆ ಅಂತಃಕರಣ ಹೊಂದಿದ ಅವರ ವರ್ತನೆ ನಿಜವಾಗಿಯೂ ಅವರನ್ನು ಅಂಕಲ್ ಸ್ಥಾನಕ್ಕೆ ಏರಿಸಿತ್ತು.

—ಕೆ.ಪಿ. ರಾಮುಗುಂಡಿ, ಬೈಲಹೊಂಗಲ

ಲೋಕನಾಥ್, ಈಸ್ಟ್‌ಮನ್ ನೆನಪು ಹಿರಿಯ ದಿವಂಗತ ನಟ ಲೋಕನಾಥ 'ಗೆಜ್ಜೆಪೂಜೆ'ಗಿಂತ ಮೊದಲು 'ಸಂಸ್ಕಾರ' ಚಿತ್ರದಲ್ಲಿ ಚಿಕ್ಕ ಪಾತ್ರವೊಂದನ್ನು ನಿರ್ವಹಿಸಿದ್ದರು. ಇದನ್ನು ಲೇಖನದಲ್ಲಿ ಸ್ಮರಿಸಬಹುದಿತ್ತು.

—ಮುಕುಂದ ಹೆರಕಲ್ಲ, ಕಲಬುರ್ಗಿ

## ಅತ್ಯುತ್ತಮ ಆರಂಭ

'ಕದ ತೆರೆದ ಅವಕಾಶದಲ್ಲಿ ಮಯಂಕ್ ಮನಸಿನಾಟ' ಲೇಖನ ಮತ್ತೊಬ್ಬ ಯಶಸ್ವಿ ಆರಂಭ ಆಟಗಾರನ ಕುರಿತು ಕ್ರೀಡಾಪ್ರಿಯರಿಗೆ ಪರಿಚಯ ಮಾಡಿಕೊಟ್ಟಿತು. ಆಸಿಸ್ ಜತೆಗಿನ ಸರಣಿಯಲ್ಲಿ ಮಯಂಕ್ ಅಗರ್ವಾಲ್ ಸೆಟೆದು ನಿಂತು ಸದೃಢ ಆಟ ಆಡಿದ್ದು ಭಲೇ ಎನಿಸಿತು. ಅನೇಕ ಸರಾಸರಿಯನ್ನು ದಾಖಲಿಸಿದ ಪತ್ರಿಕೆ ಅಗರ್ವಾಲ್ ಆರಂಭ ಅತ್ಯುತ್ತಮವಾದದ್ದು.

— ಎಚ್. ಆನಂದ್‌ಕುಮಾರ್, ಚಿತ್ರದುರ್ಗ

## ಸೀಮಿಗೊಂದು ಅಟಾಟಿ

ಡಿ.ಎಸ್. ಚೌಗಲೆಯವರ ಕಥೆ ಓದಿದೆ. ದಂಪತಿಗಳಾದ ರುದ್ರಪ್ಪ, ಪಾರವ್ವರ ಪ್ರೀತಿಯ ಕುಡಿಗಳಾದ ಮಹಾದೇವ, ಸಹದೇವ, ರಾಜೀವ, ಸಂಜೀವ ಮತ್ತು ದೇವಕಿ ಇಂಥ ತುಂಬು ಕುಟುಂಬ ಪಾಲಾಗುವ ದುರಂತ ಇಲ್ಲಿದೆ.

—ಕೊಹಿಮ, ಬಸರಕೋಡು

## ಮರೆತೆನೆಂದರ ಮರೆಯಲಿ ಹ್ಯಾಂಗ

ಲೇಖನ ಸಕಾಲಿಕವಾಗಿತ್ತು. ಇಂದು ಬಂದು ನಾಳೆ ಹೋಗುವ ರಾಜಕಾರಣಿಗಳ ತಾಳಕ್ಕೆ ಕುಣಿಯುತ್ತ, ಜವಾಬ್ದಾರಿ ಮರೆತು, ಕೆಲವೊಮ್ಮೆ ಸ್ವಾರ್ಥಕಾಗಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ದಿನಕರ ಶೆಟ್ಟಿ ಅವರ ಬದುಕೊಂದು ಉತ್ತಮ ಪಾಠ.

—ಅರವಿಂದ ಜಿ.ಜೋಷಿ, ಮೈಸೂರು.

ಎಸ್. ಗುರುಮೂರ್ತಿ, ಮಧುಕರ ಶೆಟ್ಟಿಯವರನ್ನು ಹತ್ತಿರದಿಂದ ನೋಡಿದವರು. ಅವರ ಪ್ರತಿಯೊಂದು ನಡೆ ನುಡಿ ಪ್ರಾಮಾಣಿಕವಾಗಿದ್ದರೂ ದೇವರು ಅಂಥವರನ್ನು ಹೆಚ್ಚು ದಿನ ಇಡಲಿಲ್ಲ. ಪ್ರತಿಯೊಬ್ಬರ ನೆನಪಿನಲ್ಲಿ ಉಳಿಯುವಂಥವರು. ಇವರಂಥ ಮನಸ್ಸು ರಾಜಕಾರಣಿಗಳಿಗೇಕೆ ಇಲ್ಲ?

—ರುಕ್ಮಿಣಿ ಕೃ. ದೇಶಪಾಂಡೆ, ಗೋಕಾಕ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in